ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 710/2024

ಪಿ ಡಬ್ಲ್ಯೂ: 7
ಸಿ ಡಬ್ಲ್ಯೂ: 7

| | | |
|---|---|---|
| ಸಾಕ್ಷಿಯ ಹೆಸರು | : | ಶಂಕರ್ ಗುಡದಾರ |
| ತಂದೆಯ ಹೆಸರು | : | ಮಹದೇವ್ |
| ವಯಸ್ಸು | : | 39 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಅಬಕಾರಿ ಆಯುಕ್ತರ ಕಚೇರಿ |
| ವಾಸಸ್ಥಳ | : | ಬೆಂಗಳೂರು |

ದಿನಾಂಕ: 18-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ದಿನಾಂಕ 25-11-2020 ರಿಂದ ದಿನಾಂಕ 27-09-2024 ರವರೆಗೂ ಅಬಕಾರಿ ಉಪನಿರೀಕ್ಷಕರಾಗಿ ಉಪ ಅಧೀಕ್ಷಕರ ಕಚೇರಿ ರಾಣೇಬೆನ್ನೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 29-06-2024 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ 6 ರವರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿರುತ್ತೇನೆ. ದಿನಾಂಕ 22-08-2024 ರಂದು ಆರ್ ಟಿ ಓ ಹೊಸಪೇಟೆ ರವರಿಂದ ಮೋಟಾರ್ ಸೈಕಲ್ ನ ಮಾಲೀಕತ್ವದ ಕುರಿತು ವರದಿಯನ್ನು ಪಡೆದಿದ್ದು, ಸದರಿ ವಾಹನವು ಬೀರೇಶ್ ಹನುಮಂತಪ್ಪ ಅಗಸಿಬಾಗಿಲು ರವರ ಹೆಸರಿನಲ್ಲಿ ಇರುವುದಾಗಿ ತಿಳಿದಿರುತ್ತದೆ. ದಿನಾಂಕ 26-08-2024 ರಂದು ಮುದ್ದೆ ಮಾಲುಗಳ ಸರಬರಾಜಿನ ಕುರಿತು ಕೆ ಎಸ್ ಬಿ ಸಿ ಎಲ್ ಡಿಪೋ ಹರಿಹರ ಇವರಿಂದ ವಶಪಡಿಸಿಕೊಂಡ ಮದ್ಯವು ಚಾ ಸಾ 5 ರವರ ಅಂಗಡಿಗೆ ಸರಬರಾಜು ಆಗಿರುವ ಬಗ್ಗೆ ವರದಿಯನ್ನು ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾ ಸಾ 5 ರವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನೀಡಿ, ದಿನಾಂಕ 18-09-2024 ರಂದು ಅವರ ಹೇಳಿಕೆಯನ್ನು ಪಡೆದು ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯು ವಿಚಾರಣೆಗೆ ಹಾಜರಾಗಿದ್ದು ಮೋಟಾರ್ ಸೈಕಲ್ ನ್ನು ತಾನು ಖರೀದಿಸಿರುವ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದು ಮತ್ತು ಮದ್ಯ ಖರೀದಿಸಿದ ಬಿಲ್ಲುಗಳನ್ನು ಹಾಜರುಪಡಿಸಿದ್ದು ಆ ಬಗ್ಗೆ ಆರೋಪಿಯ ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತನ ವಿರುದ್ಧ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಧೃಢಪಟ್ಟ ಕಾರಣ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಯಿತು.

4. ಸಾಕ್ಷಿಯು ನಿಪಿ 8 ರ ಪತ್ರ ಮತ್ತು ನಿಪಿ 10, ನಿಪಿ 11 ರ ಬಿಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದಿನಾಂಕ 26-08-2024 ರ ಪತ್ರ ಮತ್ತು ದಿನಾಂಕ 12-09-2024 ರ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 13 ಮತ್ತು ನಿಪಿ 14 ಎಂದು ಗುರುತಿಸಲಾಯಿತು. ಪರ್ಮಿಟ್ ಲೇಬಲ್ ಫಾರಂ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ಫಾರಂ ಸಿಎಲ್-2 ನ್ನು ನಿಪಿ 16 ಎಂದು ಗುರುತಿಸಲಾಯಿತು. ದಿನಾಂಕ 31-07-2023 ರ ಮೋಟಾರ್ ಸೈಕಲ್ ಡೆಲಿವರ್ ನೋಟ್ ನ್ನು ನಿಪಿ 17 ಎಂದು, ಫಾರಂ ನಂ.29 ಮತ್ತು ಫಾರಂ ನಂ.30 ನ್ನು ನಿಪಿ 18 ಮತ್ತು ನಿಪಿ 19 ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಬಿಲ್ಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 20 ಮತ್ತು 21 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿ ಮತ್ತು ಮು.ಮಾ. ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಆರ್ ಟಿ ಓ ವರದಿ ಪಡೆದಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 14 ರಂತೆ ವರದಿ ಪಡೆದಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಚಾ ಸಾ 5 ರವರಿಗೆ ನೋಟೀಸ್ ನೀಡಿ ವಿಚಾರಣೆ ಮಾಡಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 17 ರಿಂದ 19 ರ ದಾಖಲೆಗಳನ್ನು ಆರೋಪಿಯಿಂದ ಪಡೆದಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 20 ಮತ್ತು 21 ರ ಬಿಲ್ಲುಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿಯ ಸ್ವ ಖುಷಿ ಹೇಳಿಕೆ ಪಡೆದಿರುವ

ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದ ಮುದ್ದೆ ಮಾಲುಗಳನ್ನು ಆರೋಪಿಯ ವಿರುದ್ಧ ಸುಳ್ಳು



ಪ್ರಕರಣ ದಾಖಲಿಸಲು ಬಳಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯ ಅಂಕಿ ಸಂಖ್ಯೆ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ,

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.